## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 1527/2020

ಚಾಸಾ- 2 ಪ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 02-05-2026

| | | |
|---|---|---|
| ಹೆಸರು | : | ಶಿವಾನಂದ |
| ತಂದೆಯ ಹೆಸರು | : | ಭೀಮರಾಯ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಬಳೂಂಡಗಿ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಚಾಸಾ 3 ಪರಿಚಯ ಇರುತ್ತದೆ.

ಸಾಕ್ಷಿಗೆ ಶವ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-**9** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**9**(ಎ) ಎಂದು ಗುರುತಿಸಲಾಯಿತು.

ನಾನು ಅಪಘಾತವಾದ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಮೃತ ರಸ್ತೆ ದಾಟುತ್ತಿರುವಾಗ ಅಪಘಾತವಾಗಿರುತ್ತದೆ. ಸ್ಥಳಕ್ಕೆ ಹೋದಾಗ ಪೋಲಿಸರು ನಮ್ಮಿಂದ ಸಹಿ ಪಡೆದಿರುತ್ತಾರೆ. ಪಲ್ಸರ ಮೋಟರ ಸೈಕಲ ಇರುತ್ತದೆ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಸ.ಸ.ಅ. ರವರಿಂದ</u>

ದಿಃ 31-01-2020 ರಂದು ನನ್ನ ಮತ್ತು ಚಾಸಾ 3 ರವರ ಸಮಕ್ಷಮ ಕಲಬುರಗಿ ಆಸ್ಪತ್ರೆಯಲ್ಲಿ ಮೃತ ಈರಣ್ಣನ ಶವಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿ.

ಸಾಕ್ಷಿಗೆ ಶವಪಂಚನಾಮೆ ಕಾಲಕ್ಕೆ ತೆಗೆಯಲಾಯಿತು ಎಂದು ಹೇಳುವ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅದರಲ್ಲಿ ತನ್ನನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-**3** ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **DK** ವಕೀಲರಿಂದಃ-</u>

ಚಾಸಾ 1 ನನ್ನ ಸಂಬಂಧಿಕ ಇರುತ್ತಾರೆ ಎಂದರೆ ಸರಿ. ಮೃತ ನನ್ನ ಸಂಬಂಧಿಕ ಇರುತ್ತಾರೆ ಎಂದರೆ ಸಾಕ್ಷಿ ಚಾಸಾ 1 ರವರ ಸಂಬಂಧಿಕ ಇರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತವಾಗುತ್ತಿದ್ದಾಗ ನಾನು ಗುನ್ಹೆಸ್ಥಳದಲ್ಲಿ ಇದ್ದೆ. ಅಪಘಾತವಾದ ನಂತರ ನಾನು ಕಲಬುರಗಿ ಆಸ್ಪತ್ರೆಗೆ ಹೋಗಿರುತ್ತೇವೆ. ಕಲಬುರಗಿ ಜಿಮ್ಸ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ. 12-30 ಕ್ಕೆ ಅಪಘಾತ ಆಗಿರುತ್ತದೆ. ನಾವು ಅಸ್ಪತ್ರೆಗೆ ಹಹೋಗಲು 1 ರಿಂದ 1-30 ಗಂಟೆಗೆ ಹೋಗಿರುತ್ತೇವೆ. ನನಗೆ ಗುನ್ಹೆಸ್ಥಳ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ಶವ ಪಂಚನಾಮೆಯನ್ನು ರಾತ್ರಿ 12-30 ಕ್ಕೆ ಮಾಡಿರುತ್ತಾರೆ. ಆಗ ನಾವು 4 ಜನ ಇದ್ದೆವು. ನನೊಂದಿಗೆ ಚಾಸಾ 3 ರವರು ಇದ್ದರು. ಅವರು ಸಹಿ ಮಾಡಿರುತ್ತಾರೆ. ಪೋಲಿಸರು ಆಸ್ಪತ್ರೆಯಲ್ಲಿ ಸಹಿ ಪಡೆದಿರುತ್ತಾರೆ. ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ **- ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು

ಅಫಜಲಪೂರ